# ಭಾಗವತದ ವಿಶಿಷ್ಟ ಭಾಗ : 'ಹಂಸಗೀತೆ'

**ಡಾ. ಕೆ.ಎಲ್.ಪ್ರಸನ್ನಾಕ್ಷೀ**

ದಿವ್ಯ ಕಥೆಗಳ ವೈವಿಧ್ಯತೆಯಿಂದಲೂ, ಭಕ್ತಿ-ಭಾವಗಳ ಮಾಧುರ್ಯದಿಂದಲೂ ತುಂಬಿರುವ ಭಾಗವತ ಮಹಾಪುರಾಣದಲ್ಲಿ ಆಧ್ಯಾತ್ಮಿಕ ತತ್ತ್ವ, ಚಿಂತನೆಗಳು ಅಲ್ಲಲ್ಲಿ ಬರುತ್ತವೆ. ಅಂಥ ಒಂದು ಭಾಗವನ್ನು ಕುರಿತು ಇಲ್ಲಿ ವಿವರಿಸಿರುವ ಲೇಖಕಿ, ಮೈಸೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಸಂಸ್ಕೃತ ಭಾಷೆ ಹಾಗೂ ಸಾಹಿತ್ಯ, ವೇದಾಂತ ಹಾಗೂ ಇನ್ನಿತರ ಆಧ್ಯಾತ್ಮಿಕ ಕೃತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು ಮೈಸೂರು ಆಶ್ರಮದ ಭಕ್ತರು. ದೀರ್ಘಕಾಲದಿಂದ ಅವರು 'ವಿವೇಕಪ್ರಭ' ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ.

**ಶ**ರೀರ ಇರುವುದು ಭೋಗಗಳನ್ನು ಅನುಭವಿಸಲು. ಆದುದರಿಂದ ಭೋಗಾನುಭವ ಸಾಮರ್ಥ್ಯ ಕುಗ್ಗುವ ಮುನ್ನ ಎಷ್ಟು ಹೆಚ್ಚು ಸಾಧ್ಯ ಅಷ್ಟು ಭೋಗಗಳನ್ನು ಅನುಭವಿಸಿಬಿಡಬೇಕು ಎಂಬ ಧಾವಂತ ಮನುಷ್ಯನಿಗೆ. ಆ ತುಡಿತ, ಆತುರ ದಿನದಿನಕ್ಕೆ ಜನತೆಯಲ್ಲಿ ಹೆಚ್ಚುತ್ತಿರುವಂತೆ ಭಾಸವಾಗುತ್ತಿದೆ. ಈ ಭೋಗಕ್ಕೆ ಸಂಬಂಧಿಸಿದ ವಸ್ತುಗಳನ್ನು ಸಂಗ್ರಹಿಸಿಕೊಳ್ಳುವ ಅನುಭವಿಸುವ ಹಾರಾಟದಲ್ಲಿ ಮಾನವೀಯ ಮೌಲ್ಯಗಳು ಕುಗ್ಗುತ್ತಿರುವಂತೆ ಕಾಣಿಸುತ್ತದೆ. ಆವರಿವರ ವಸ್ತು, ಆಸ್ತಿ, ಐಶ್ವರ್ಯಗಳನ್ನು ಕಬಳಿಸುವ ಹುನ್ನಾರದ ತೀವ್ರತೆಯಲ್ಲಿ ತಮ್ಮ ತಲೆಯ ಮೇಲೆ ಆಡುತ್ತಿರುವ ಹಾವಿನ ಹೆಡೆಯ ಕಡೆ ಗಮನಿಸಲು ಅವಕಾಶ ದೊರೆತಂತೆ ಕಾಣುವುದಿಲ್ಲ. ಈ ರೀತಿ ಲೋಭಿಗಳಾಗಿ ಭೋಗಾಭಿಲಾಷೆಯ ಲಾಲನೆಯಲ್ಲಿ ಮುಳುಗಿ ಮೈಮರೆತಿರುವವರ ಮೇಲೆ ಇಲಿಯನ್ನು ನುಂಗಲು ಹೊಂಚಿದ್ದ ಸರ್ಪದಂತೆ ಪರಮಾತ್ಮ ಯಮರೂಪದಲ್ಲಿ ಎರಗಿ ಯಾವ ಕ್ಷಣದಲ್ಲೋ ನುಂಗಿಯೇ ಬಿಡುವನು ಎಂದು ಭಾಗವತ ಹೇಳುತ್ತದೆ:

> **ಪ್ರಮತ್ತಮುಚ್ಚೈರಿತಿಕೃತ್ಯಚಿಂತಯಾ**
> **ಪ್ರವೃದ್ಧಲೋಭಂ ವಿಷಯೇಷು ಲಾಲಸಮ್ ।**
> **ತ್ವಮಪ್ರಮತ್ತಃ ಸಹಸಾಭಿಪದ್ಯಸೇ ।**
> **ಕ್ಷುಲ್ಲೇಲಿಹಾನೋಽಹಿರಿವಾಖುಮಂತಕಃ ॥** *(೪.೨೪.೬೬.)*

ಹಾಗಾಗಿ ಅಂತಹವರಿಗೆ ಕೊನೆಗೆ ಭೋಗದ ತೃಪ್ತಿಯೂ ಇಲ್ಲವಾಗುತ್ತದೆ. ಇಂತಹ ಒಂದು ಸ್ಥಿತಿಯನ್ನೇ 'ಭೋಗಾ ನ ಭುಕ್ತಿ ವಯಮೇವ ಭುಕ್ತಾಃ' ಎಂಬ ಸುಭಾಷಿತವೂ ತಿಳಿಸುವುದು — 'ಭೋಗ ಅನುಭವಿಸಿ ಮುಗಿಯಲಿಲ್ಲ, ಅಷ್ಟರಲ್ಲಿ ನಾವೇ ಕಾಲ ವಶರಾಗಿ ಹೋದೆವು ಅಷ್ಟೇ.'

ಇದು ಮಾಯಾಶಕ್ತಿಯ ಪ್ರಾಬಲ್ಯ. ಆ ಶಕ್ತಿಯು ಬ್ರಹ್ಮರುದ್ರ ಇಂದ್ರಾದಿಗಳನ್ನೂ ಋಷಿಮುನಿಗಳನ್ನೂ ತನ್ನ ಮೋಹದ ಬಲೆಯಲ್ಲಿ ಕೆಡವಿಕೊಂಡು ಬಿಡುವಳೆಂದು 'ದೇವೀ ಪ್ರಾತಃಸ್ಮರಣ ಸ್ತೋತ್ರ' ಹೇಳುತ್ತದೆ. ಬದುಕಿನಲ್ಲಿ ಪ್ರಕೃತಿಯ ಅಥವಾ ಮಹಾಮಾಯೆಯ ಮಹಾಪ್ರಾಬಲ್ಯಕ್ಕೆ ಸಿಲುಕಿ ನಲುಗುವ ಜೀವಗಳನ್ನು ಕಂಡು ಜೀವಕಾರುಣ್ಯದಿಂದ ದ್ರವಿಸಿದ ಅನುಭವಿಗಳೂ ಕೊನೆಗೆ ಪರಮಾತ್ಮನೂ, ಕಾಲಕಾಲದಲ್ಲಿ ವಿವಿಧ ರೀತಿಯಲ್ಲಿ ಜನರನ್ನು ಎಚ್ಚರಿಸುತ್ತಾ ಬಂದಿದ್ದಾರೆ. ರಾಮಾಯಣ ಭಾರತ ಪುರಾಣಾದಿಗಳು ಮಾಡಿದ, ಮಾಡುತ್ತಿರುವ ಕೆಲಸ ಇದೇ. ಇವುಗಳಲ್ಲಿ ಒಬ್ಬ ವ್ಯಕ್ತಿಯ ಬದುಕಿನ ಹಿನ್ನೆಲೆಯ ಕಥೆಯನ್ನು ಹೇಳುತ್ತಾ, ಅವನನ್ನು ನೆಪಮಾಡಿ ಹೇಳುವ ಲೋಕೋಪಕಾರಕವಾದ, ಮನುಕುಲವನ್ನು ಎಚ್ಚರಿಸುವ, ಸನ್ಮಾರ್ಗದಲ್ಲಿ ನಡೆಯುವಂತೆ ಪ್ರಚೋದಿಸುವ, ಸದಾಚಾರಗಳನ್ನು ಬೋಧಿಸುವ ಅನೇಕ ತತ್ತ್ವೋಪದೇಶ ವಚನಗಳು ಕಂಡುಬರುತ್ತವೆ.

## ಗೀತಾ-ಸ್ವರೂಪ

'ಗೈ ಶಬ್ದೇ' ಅಥವಾ 'ಗಾನೇ' ಎಂಬ ಧಾತುವಿನಿಂದ ಬಂದಿರುವ 'ಗೀತಾ' ಶಬ್ದವು, ಇಂತಹ ಮೋಹನಿವಾರಕ ವಾಕ್ಯಗಳನ್ನು ಪ್ರಧಾನವಾಗಿ ಅನುಭವಿಗಳ ಮಹಾತ್ಮರ ಮಾತುಗಳನ್ನು ಪ್ರತಿನಿಧಿಸುತ್ತದೆ. ಸಾಧಾರಣವಾಗಿ ಪರಮಾತ್ಮನಿಂದಲೇ ಅಥವಾ ಅವನ ವಿಭೂತಿ ರೂಪದಿಂದ ಬಂದಂತಹ ಮಾತುಗಳು 'ಗೀತಾ' ಎನ್ನಿಸಿಕೊಳ್ಳುತ್ತವೆ. ಆತ್ಮವಿದ್ಯೋಪದೇಶಕವಾದ ಬ್ರಹ್ಮತತ್ತ್ವ ಸ್ವರೂಪ ಬೋಧಕವಾದ ಹಾಗೂ ಆ ವಿದ್ಯೆಯನ್ನು ಪಡೆಯುವ ಸಾಧನಗಳಿಗೆ ಸಂಬಂಧಿಸಿದ ಮಾತುಗಳನ್ನು ಇದು ಒಳಗೊಳ್ಳುತ್ತದೆ. ಈ 'ಗೀತಾ' ಎಂಬುದು, ಮೂರೂಲೋಕಗಳ ಶ್ರೇಯಸ್ಸನ್ನೂ ಹಿತವನ್ನೂ ಸುಭದ್ರತೆಯನ್ನು ಮಂಗಳವನ್ನೂ ಬಯಸುವಂತಹುದು, ತಂದುಕೊಡುವಂತಹದು ಆಗಿರುತ್ತದೆ.

## ಗೀತಾವೈವಿಧ್ಯ

'ಗೀತೆ' ಎಂದ ಕೂಡಲೇ ಕುರುಕ್ಷೇತ್ರ ರಣಾಂಗಣದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ಗೀತೆಯೇ ಸಾಧಾರಣವಾಗಿ ಎಲ್ಲರ ಮನಃಪಟಲದಲ್ಲಿ ಮೂಡುವ ಚಿತ್ರ. ಆದರೆ 'ವ್ಯಾಧಗೀತಾ', 'ಬ್ರಾಹ್ಮಣಗೀತಾ', 'ಅನುಗೀತಾ' ಇತ್ಯಾದಿ ಅನೇಕ ಗೀತೆಗಳು ಮಹಾಭಾರತದಲ್ಲೇ ಕಂಡುಬರುತ್ತವೆ. ಪರಮಾತ್ಮನ ಪರಿಪೂರ್ಣ ಸ್ವರೂಪ ಸ್ವಭಾವ ಗುಣಧರ್ಮಗಳನ್ನೂ, ಅವನ ಲೀಲೆಯಾಗಿ ಅವನೇ ನಿರ್ಮಿಸಿ ಆಡುವ ಸೃಷ್ಟಿಸ್ಥಿತಿಲಯ

ವ್ಯಾಪಾರಗಳನ್ನೂ, ಆ ಸಂದರ್ಭಗಳಲ್ಲಿ ಅವನೇ ತಳೆದ, ತಳೆಯಬೇಕಾಗಿ ಬಂದ, ಅನೇಕ ಅವತಾರಗಳ ಸಂದರ್ಭವನ್ನೂ ಚಿತ್ರಿಸುವ ಮಧುರಾತಿಮಧುರ ರಸ ಜಿನುಗುವ ಕಾವ್ಯವಾದ 'ಭಾಗವತ'ದಲ್ಲೂ 'ಉದ್ಧವಗೀತಾ', 'ವೇಣುಗೀತಾ', 'ಗೋಪೀಗೀತಾ', 'ಭ್ರಮರಗೀತಾ' ಇತ್ಯಾದಿ ಅನೇಕ ಗೀತೆಗಳಿವೆ. ಅವುಗಳಲ್ಲಿ ಈಗ ನಾವು ತಿಳಿದುಕೊಳ್ಳಲು ಹೊರಟಿರುವ 'ಹಂಸಗೀತೆ'ಯೂ ಒಂದು. ಪರಮಾತ್ಮನು 'ಹಂಸ'ರೂಪದಲ್ಲಿ ಬಂದು ಬ್ರಹ್ಮನ ಮಾನಸಪುತ್ರರಾದ ಸನಕ ಸನಂದನ ಸನತ್ ಸನತ್ಕುಮಾರರಿಗೆ ತತ್ತ್ವವನ್ನು ತಿಳಿಸುವ ಭಾಗವನ್ನು ಇದು ಒಳಗೊಂಡಿದೆ.

'ಭಾಗವತ'ದ ೧೧ನೇ ಸ್ಕಂಧದಲ್ಲಿ ಬರುವ 'ಉದ್ಧವಗೀತೆ'ಯ ಒಂದು ಭಾಗ ಈ 'ಹಂಸಗೀತೆ'. 'ಅವಧೂತ' ಗೀತೆಯೂ ಈ ಗೀತೆಯ ಒಂದು ಭಾಗವೇ ಆಗಿದೆ. ಭಾಗವತದ ೧೧ನೆಯ ಸ್ಕಂಧದ ಏಳನೆಯ ಅಧ್ಯಾಯದಿಂದ ಇಪ್ಪತ್ತೊಂಬತ್ತನೆಯ ಅಧ್ಯಾಯದವರೆಗಿನ 'ಉದ್ಧವಗೀತೆ'ಯಲ್ಲಿ ಹದಿಮೂರನೆಯ ಅಧ್ಯಾಯದಲ್ಲಿ ಈ 'ಹಂಸಗೀತೆ' ಬರುತ್ತದೆ.

### 'ಹಂಸಗೀತಾ' ಉಗಮದ ಹಿನ್ನೆಲೆ

ಪರಮಾತ್ಮನು ತನ್ನ ಲೀಲಾಶರೀರವನ್ನು ಉಪಸಂಹಾರ ಮಾಡಿಕೊಳ್ಳುವುದಾಗಿ ಸಂಕಲ್ಪಿಸಿದಾಗ ಅವನ ಭೃತ್ಯಶ್ರೇಷ್ಠನೂ ಮಿತ್ರಶ್ರೇಷ್ಠನೂ ಭಕ್ತಶ್ರೇಷ್ಠನೂ ಆದ ಉದ್ಧವನು ಭೂಲೋಕದಲ್ಲಿ ಮತ್ತೂ ಕೆಲಕಾಲ ಉಳಿಯಬೇಕೆಂದು ಪರಮಾತ್ಮನನ್ನು ಅನೇಕ ರೀತಿಯಲ್ಲಿ ಪ್ರಾರ್ಥಿಸಿಕೊಳ್ಳುತ್ತಾನೆ. ಪರಮಾತ್ಮನು ಅವನ ಪ್ರಾರ್ಥನೆಗೆ ಒಡಂಬಡದಿದ್ದಾಗ ಲೋಕಕ್ಷೇಮಕ್ಕಾಗಿ, ಸುಭದ್ರತೆಗಾಗಿ ಸಂದೇಶ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾನೆ. ಆಗ ಉದ್ಧವನನ್ನು ನಿಮಿತ್ತಮಾಡಿ ಪರಮಾತ್ಮನು ಹೇಳಿದ ತತ್ತ್ವಬೋಧ ವಿಚಾರಗಳೇ 'ಉದ್ಧವಗೀತಾ'. ಬ್ರಹ್ಮನ ಅವಯವಗಳಿಂದ ಬಂದ, ಸಪ್ತರ್ಷಿಗಳಲ್ಲಿ ಒಬ್ಬರಾದ, ಅತ್ರಿಮಹರ್ಷಿಯ ಪುತ್ರನಾಗಿ ಜನಿಸಿದ ಬ್ರಹ್ಮ-ವಿಷ್ಣು-ಈಶ್ವರರ ಅಂಶಾವತಾರಿಯಾದ, ಅವಧೂತ ಪರಂಪರೆಯ ಮೂಲನಾದ ದತ್ತಾತ್ರೇಯನು ಯದುರಾಜನಿಗೆ ಏನನ್ನು ಬೋಧಿಸಿದನೋ, ಅದನ್ನೇ ತಾನು ಉದ್ಧವನಿಗೆ ಬೋಧಿಸುತ್ತಿರುವುದಾಗಿ ಈ ಗೀತೆ ಪ್ರಾರಂಭವಾಗುತ್ತದೆ. ಈ ಗೀತೆಯ ಪ್ರಾರಂಭದ ಮೂರು ಅಧ್ಯಾಯಗಳೇ 'ಅವಧೂತಗೀತಾ' ಎಂಬ ಹೆಸರಿನಿಂದ ಪ್ರಸಿದ್ಧವಾಗಿರುತ್ತದೆ.

### ಹಂಸಗೀತಾ

ಮಾನವರಿರಲಿ, ಸೃಷ್ಟಿ ಹೊಂದಿದ ಎಲ್ಲವೂ, ಅಷ್ಟೇ ಏಕೆ ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳಿಗಾಗಿ ರೂಪು ತಳೆದ ಬ್ರಹ್ಮ ವಿಷ್ಣು ಈಶ್ವರಾದಿಯಾಗಿ ಎಲ್ಲರೂ ಪ್ರಕೃತಿಯ ತ್ರಿಗುಣಗಳಾದ ಸತ್ತ್ವ ರಜಸ್ಸು ತಮೋಗುಣಗಳ ಅಧೀನರೇ ಎಂದು ಭಗವದ್ಗೀತೆಯು ತಿಳಿಸುತ್ತದೆ.

**ನ ತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾ ಪುನಃ ।**
**ಸತ್ವಂ ಪ್ರಕೃತಿಜೈರ್ಮುಕ್ತಂ ಯದೇಭಿಃ ಸ್ಯಾತ್ತ್ರಿಭಿರ್ಗುಣೈಃ॥**
*(೧೮-೪೦)*

ಪರಮಾತ್ಮನು ಇಲ್ಲಿಯೂ ಉದ್ಧವನಿಗೆ ಅದೇ ವಿಷಯವನ್ನು ತಿಳಿಸುತ್ತಾ ಸತ್ತ್ವ ರಜಸ್ ತಮಸ್ ಇದು ಪ್ರಕೃತಿಯ ಪರಿಣಾಮವಾದ ಬುದ್ಧಿಯದು. ಅದು ಆತ್ಮಧರ್ಮವಲ್ಲ. ಸದ್ಧರ್ಮ ಪರಿಪಾಲನೆ ಸದಾಚಾರಗಳಿಂದ ಸತ್ವಗುಣವನ್ನು ಕ್ರಮವಾಗಿ ವೃದ್ಧಿಪಡಿಸಿಕೊಳ್ಳಬೇಕು. ಅದರಿಂದ ಭಕ್ತಿ ಹುಟ್ಟುತ್ತದೆ. ಅದೇ ಸಕಲ ಜೀವಿಗಳ ಸ್ವಧರ್ಮ. ಈ ಸ್ವಧರ್ಮ ಅನುಷ್ಠಾನದಿಂದ ವೃದ್ಧಿಯಾದ ಸತ್ವವು ರಜಸ್ ಮತ್ತು ತಮೋಗುಣಗಳನ್ನು ನಾಶಪಡಿಸುತ್ತದೆ. ಕಾಡಿನಲ್ಲಿ ಬಿದಿರು ಮೆಳೆಗಳ ಉಜ್ಜುವಿಕೆಯಿಂದ ಹುಟ್ಟಿದ ಬೆಂಕಿ ಕಾಡನ್ನು ಸಂಪೂರ್ಣವಾಗಿ ಸುಟ್ಟು ಭಸ್ಮ ಮಾಡಿದ ಮೇಲೆಯೇ ಶಾಂತವಾಗುತ್ತದೆ. ಹಾಗೆಯೇ ಮನುಷ್ಯನ ದೇಹದಲ್ಲಿರುವ ದೇಹವೇ ತಾನು ಎಂಬ ಮಿಥ್ಯಾಬುದ್ಧಿಗೆ ಹಾಗೂ ದೇಹಪ್ರಾಪ್ತಿಗೆ ಕಾರಣವಾದ ಮೂರೂಗುಣಗಳನ್ನು ವಿಚಾರಗಳ ಮಂಥನದಿಂದ ಹುಟ್ಟಿದ ಜ್ಞಾನಾಗ್ನಿ ಸುಟ್ಟು ಭಸ್ಮಮಾಡಿಬಿಡುತ್ತದೆ.

### ಸತ್ವಗುಣವನ್ನು ವೃದ್ಧಿಪಡಿಸಿಕೊಳ್ಳುವುದರ ಆವಶ್ಯಕತೆ

ಮನಸ್ಸು ಸತ್ವಗುಣ ಪ್ರಧಾನವಾಗಿದ್ದರೂ, ಈ ದೇಹವೇ ನಾನು ಎಂಬ ಬುದ್ಧಿಯಿಂದ ರಜಸ್ಸು ತಮಸ್ಸುಗಳ ಪ್ರಭಾವಕ್ಕೆ ಒಳಗಾಗುತ್ತದೆ. ಮತ್ತು ಆ ಎರಡು ಗುಣಗಳು ಸಂಪೂರ್ಣವಾಗಿ ಸತ್ವಗುಣವನ್ನು ಮರೆಮಾಡಿಬಿಡುತ್ತವೆ, ಹಾಗಾದಾಗ ಮನಸ್ಸಿನಲ್ಲಿ ವಸ್ತುಸ್ಥಿತಿಗೆ ವಿರುದ್ಧವಾದ ಸಂಕಲ್ಪ ಹುಟ್ಟಿಕೊಳ್ಳುತ್ತದೆ. ಅದರಿಂದ ಆರಂಭದಲ್ಲಿ ನಾವು ಗಮನಿಸಿದ ವಿಷಯೋಪಭೋಗ ಚಿಂತನಕ್ಕೆ, ಕಾಮೋಪಭೋಗದ ಸೆಳೆತಕ್ಕೆ ಚಿತ್ತವಶವಾಗುತ್ತದೆ. ಸತ್ವಗುಣವನ್ನು ಅಭಿವೃದ್ಧಿಗೊಳಿಸಿಕೊಂಡಾಗ ಅದರ ಬಲದಿಂದ ವಿಷಯಗಳಲ್ಲಿ ಅಂದರೆ ಭೋಗ ಹಾಗೂ ಅದರ ಸಾಧನಗಳ ವಿಷಯದಲ್ಲಿ ದೋಷದೃಷ್ಟಿ ಬೆಳೆಯುತ್ತದೆ. ಆ ಜ್ಞಾನದಿಂದ ನಿಧಾನವಾಗಿ ರಜಸ್ಸು ತಮಸ್ಸುಗಳಿಗೆ ಸಂಬಂಧಿಸಿದ ಕಾರ್ಯಗಳಿಂದ ಮನಸ್ಸನ್ನು ಹಿಂದಕ್ಕೆ ಸೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಆಗ ವ್ಯಕ್ತಿ ರಜಸ್ಸು ತಮಸ್ಸುಗಳಿಗೆ ಸಂಬಂಧಿಸಿದ ವಿಷಯೋಪಭೋಗಗಳಲ್ಲಿ ನಿರಾಸಕ್ತನಾಗುತ್ತಾನೆ. ಆದುದರಿಂದ ಸತ್ವವನ್ನು ವೃದ್ಧಿಮಾಡಿಕೊಳ್ಳಲು, ಜೀವಿಯು ಪ್ರಯತ್ನಪೂರ್ವಕವಾಗಿ ಮನಸ್ಸನ್ನು ಭಗವಂತನಲ್ಲಿ ನೆಲೆನಿಲ್ಲಿಸಲು ನಿರಂತರ ಅಭ್ಯಾಸ ಮಾಡಬೇಕು. ಇದನ್ನೇ ನನ್ನ ಶಿಷ್ಯರಾದ ಸನಕಾದಿಮಹರ್ಷಿಗಳೂ ಬೋಧಿಸಿದ್ದಾರೆ — ಎಂದು ಭಗವಂತನು ಹೇಳಿದನು.

ಆಗ ಉದ್ಧವನು, ''ನೀನು ಸನಕಾದಿಗಳಿಗೆ ಯಾವಾಗ ಯಾವ ರೂಪದಲ್ಲಿ ಏನು ಉಪದೇಶ ಮಾಡಿದೆ? ಆ ಸಂದರ್ಭ ಯಾವುದು? ಅದನ್ನು ದಯಮಾಡಿ ತಿಳಿಸು'' ಎಂದು ಭಗ

ವಂತನನ್ನು ಪ್ರಾರ್ಥಿಸುತ್ತಾನೆ. ಈ ಪ್ರಶ್ನೆಗಳಿಗೆ ಭಗವಂತನು ಕೊಟ್ಟ ಉತ್ತರವೇ 'ಹಂಸಗೀತೆ' ಎಂದು ಪ್ರಸಿದ್ಧವಾಗಿರುವುದು.

### ಸನಕಾದಿಗಳ ಪ್ರಶ್ನೆ

ಬ್ರಹ್ಮನ ಮಾನಸಪುತ್ರರಾದ ಸನಕಾದಿಗಳು ತಮ್ಮ ತಂದೆಯನ್ನು, ''ಯೋಗದ ಸೂಕ್ಷ್ಮವಾದ ಪರಾಕಾಷ್ಠೆ ಯಾವುದು? ಅದನ್ನು ಮಾನವರು ಹೊಂದುವುದಾದರೂ ಹೇಗೆ? ಏಕೆಂದರೆ ಅವರ ಮನಸ್ಸು ಅಥವಾ ಚಿತ್ತ ಸತ್ವ ರಜಸ್ಸು ತಮೋಗುಣಗಳ ಪರಿಣಾಮವೇ ಆಗಿದೆ. ಚಿತ್ತ ಆ ಗುಣಗಳಲ್ಲಿ ಒಂದಾಗಿ ಸೇರಿ ಹೋಗಿದೆ. ವಿಷಯಗಳ ಭೋಗಾಭಿಲಾಷೆಯ ತುಡಿತ ಇಂದ್ರಿಯಗಳಲ್ಲಿ ಹುಟ್ಟುವುದಕ್ಕೆ ಈ ಗುಣಪ್ರೇರಿತ ಚಿತ್ತವೇ ಕಾರಣ. ಚಿತ್ತದ ಪ್ರೇರಣೆಗೊಳಗಾದ ಇಂದ್ರಿಯಗಳು ತಂದಿತ್ತ ವಿಷಯ ಸುಖಾನುಭವಗಳ ಒಟ್ಟು ಮೊತ್ತವೇ ಚಿತ್ತ. ಹಾಗಾಗಿ ಭೋಗಗಳು ವಿಷಯಗಳು ಚಿತ್ತದಲ್ಲಿ ಲೀನವಾಗಿಬಿಟ್ಟಿವೆ. ಚಿತ್ತ ಗುಣಮಯವಾಗಿದೆ. ಹೀಗೆ ಒಂದಕ್ಕೊಂದು ಬಿಡಿಸಲಾಗದ ಕಗ್ಗಂಟಾಗಿ ಮೂರು ಗುಣಗಳೂ, ಚಿತ್ತ ಮತ್ತು ವಿಷಯಗಳು ಬೆಸೆದುಕೊಂಡುಬಿಟ್ಟಿರುವಾಗ ಅವುಗಳಿಂದ ಬಿಡುಗಡೆ ಹೊಂದುವುದು ಹೇಗೆ? ಈ ಚಿತ್ತ, ವಿಷಯ, ಗುಣಗಳ ಬಂಧನದಿಂದ ಬಿಡುಗಡೆ ಹೊಂದಿ ಮುಕ್ತಿ ಹೊಂದಬೇಕೆಂದು ಇಚ್ಛೆಯುಳ್ಳವನು ಭೋಗಾಭಿಲಾಷೆಗಳನ್ನು ಚಿತ್ತದಿಂದ, ಚಿತ್ತವನ್ನು ವಿಷಯಗಳಿಂದ ಬೇರ್ಪಡಿಸುವುದಾದರೂ ಹೇಗೆ?'' ಎಂದು ಪ್ರಶ್ನಿಸಿದರು.

### ಬ್ರಹ್ಮನ ನಿರುತ್ತರ

ಬ್ರಹ್ಮನು ಪ್ರವೃತ್ತಿಮಾರ್ಗದಲ್ಲಿರುವವನು, ಸೃಷ್ಟಿಕರ್ಮವನ್ನು ನಿರಂತರ ಮಾಡುತ್ತಿರುವವನು. ಈ ಕ್ರಿಯೆ ಸಂಪೂರ್ಣವಾಗಿ ಸತ್ವ ರಜಸ್ಸು ತಮಸ್ಸುಗಳನ್ನೇ ಅವಲಂಬಿಸಿ ನಡೆಯುವಂತಹುದು. ಹಾಗಾಗಿ ಅವನ ಬುದ್ಧಿ ಚಿತ್ತ ಈ ಗುಣಗಳ ಸುತ್ತವೇ ಸುತ್ತುತ್ತಿರುತ್ತದೆ. ಆದುದರಿಂದ ಈ ಪ್ರಶ್ನೆಯ ಮೂಲ ಏನು ಎಂಬುದೇ ಅವನಿಗೆ ಅರ್ಥ ಆಗಲಿಲ್ಲ. ಆಗ ಬೇರೆ ದಾರಿ ಕಾಣದೆ ಅವನು ಪರಮಾತ್ಮನನ್ನು ಸ್ಮರಿಸಿಕೊಂಡನು. ಆಗ ಪರಮಾತ್ಮನು ಹಂಸಪಕ್ಷಿಯ ರೂಪದಲ್ಲಿ ಅಲ್ಲಿಗೆ ಬಂದನು. ಅದನ್ನು ಕಂಡ ಕೂಡಲೇ ಬ್ರಹ್ಮನೂ ಸನಕಾದಿಗಳೂ ಎದ್ದು ಆದರಿಸಿ ಅದನ್ನು ಸತ್ಕರಿಸಿದರು. ಅದಕ್ಕೆ ತಲೆಬಾಗಿ ನಮಸ್ಕರಿಸಿ ''ನೀನು ಯಾರು?'' ಎಂದು ಪ್ರಶ್ನೆ ಮಾಡಿದರು. ಆಗ ಹಂಸಪಕ್ಷಿ ಆ ಪ್ರಶ್ನೆಗೆ ಕೊಟ್ಟ ಉತ್ತರವೇ 'ಹಂಸ-ಗೀತಾ'.

### 'ಹಂಸ' ಕೊಟ್ಟ ಉತ್ತರ

ಪರಮಾರ್ಥವಾಗಿ ಇರುವ ವಸ್ತು ಒಂದೇ. ಅದು ನಾನಾ ಆಗಲು ಸಾಧ್ಯವೇ ಇಲ್ಲ. ಅದರಲ್ಲಿ ಪ್ರಭೇದವೂ ಇಲ್ಲ. ಆದರೂ ನೀವು 'ನಾನು ಯಾರು?' ಎಂದು ಪ್ರಶ್ನೆಯನ್ನು ಕೇಳುವುದು ಹೇಗೆ ಸರಿ? ಏಕೆಂದರೆ ಪಶು ಪಕ್ಷಿ ಮೃಗ ಗಿಡ ಮರ ಬಳ್ಳಿ ಮುಂತಾದ ಶರೀರಗಳು ಸ್ಥಾವರವೋ ಜಂಗಮವೋ ಆಗಿರಬಹುದು. ಅದು ತನ್ನನ್ನು 'ನಾನು' ಎಂದು ಹೇಳಿಯೇ ವ್ಯವಹರಿಸುತ್ತದೆ ತಾನೆ ! ಹಾಗಾಗಿ ಈ 'ನಾನು' ಎಂಬುದು ವಿಶ್ವಾತ್ಮಕವಾಗಿರುವ ಎಲ್ಲದರಲ್ಲಿಯೂ ಇದೆ. ಅದು 'ನಾನು' ಎಂಬುದಾಗಿಯೇ ಇದೆ. ಅದಕ್ಕೆ ಬೇರೆ ಹೆಸರಿಲ್ಲ. ವಿಶ್ವದಲ್ಲಿ ಎಲ್ಲಿಂದ ಎಲ್ಲಿ ಹೋದರೂ ವಸ್ತು, ವ್ಯಕ್ತಿ ತನ್ನನ್ನು ತಾನು 'ನಾನು' ಎಂಬ ಶಬ್ದದಿಂದಲೇ ನಿರ್ದೇಶಿಸಿಕೊಳ್ಳುತ್ತದೆ. ಈ 'ನಾನು' ಎಂಬುದಕ್ಕೆ ಕತ್ತೆ ಕೋಳಿ ನಾಯಿ ಬೆಟ್ಟ ಹಸು ಹುಲಿ ಗಿಡ ಮರ ಮನುಷ್ಯ ಇತ್ಯಾದಿ ಯಾವುದೇ ನಿರ್ದಿಷ್ಟವಾದ ಹೊರ ಆಕಾರ ಇಲ್ಲ. ಆ ವಸ್ತುಗಳು ಸದ್ವಸ್ತುಗಳೋ ಅಸದ್ವಸ್ತುಗಳೋ ದೈವೀ ಸಂಪತ್ತಿನಿಂದ ಕೂಡಿದವೋ ಆಸುರೀ ಸಂಪತ್ತಿನಿಂದ ಕೂಡಿದವೋ ಆಗಿವೆ. ಆ ಗುಣಗಳೊಡನೆ 'ನಾನು' ಎಂದು ಪ್ರತಿಶರೀರಗತನಾದವನು ಹೇಳಿಕೊಳ್ಳುವ 'ವಸ್ತು' ಅಥವಾ 'ತತ್ತ್ವ'ಕ್ಕೆ ಯಾವ ಸಂಬಂಧವೂ ಇರುವುದಿಲ್ಲ. ವಾಸ್ತವಿಕ ಸಂಗತಿ ಇದು. ನಾನು ನಿಮ್ಮ ಪ್ರಶ್ನೆಗೆ ಹೇಗೆ ತಾನೆ ಉತ್ತರ ಕೊಡಲಿ?'' — ಎಂದು ಪ್ರಶ್ನೆಗೆ ಮತ್ತೊಂದು ಪ್ರಶ್ನೆಯನ್ನೇ ಹಂಸವು ಉತ್ತರವಾಗಿ ಕೊಟ್ಟಿತು.

### 'ನಾನು' ಎಂಬುದೇ ಎಲ್ಲ

''ದೇವತೆಗಳು ಮನುಷ್ಯರು ಪಶು ಪಕ್ಷಿ ಇತ್ಯಾದಿಯಾಗಿ ಯಾವ ಯಾವ ಆಕಾರದ ಶರೀರಗಳಿವೆಯೋ ಅವೆಲ್ಲ ಪಂಚಭೂತಗಳಿಗೆ ಸೇರಿದ್ದು. ಆ ಎಲ್ಲವೂ ಹೊರರೂಪ ಹೊರಭಾವ ಮಾತ್ರ. ಆ ಎಲ್ಲ ಆಕಾರಾದಿಗಳಲ್ಲೂ ಇರುವ 'ನಾನು' ಎಂದು ಹೇಳಿಕೊಳ್ಳುವ ತತ್ತ್ವ ಒಂದೇ. ಆದುದರಿಂದ 'ಕೋ ಭವಾನ್' ಎಂದು ನೀವು ಕೇಳಿದ ಪ್ರಶ್ನೆ ವಿಚಾರರಹಿತವಾದುದು, ಕೇವಲ ವ್ಯವಹಾರದ ನೆಲೆಗೆ ಮಾತ್ರ ಸೀಮಿತವಾದುದು ಅಷ್ಟೆ. ಮನಸ್ಸಿನಿಂದ, ಮಾತಿನಿಂದ, ದೃಷ್ಟಿಯಿಂದ ಅಂದರೆ ಜ್ಞಾನೇಂದ್ರಿಯಗಳಿಂದ ಯಾವಯಾವದನ್ನು ಅರಿತುಕೊಂಡಿದ್ದೇವೋ ಅರಿತುಕೊಳ್ಳುತ್ತಿದ್ದೇವೋ ಆ ಎಲ್ಲವೂ 'ನಾನೇ'; 'ನಾನು' ಎಂಬುದರಿಂದ ಭಿನ್ನವಾದುದು ಯಾವುದೂ ಇಲ್ಲ, ಏನೂ ಇಲ್ಲ, ಇದೇ ಸಿದ್ಧಾಂತ'' — ಎಂದು ಉತ್ತರಿಸಿತು.

ಈ ಉತ್ತರವನ್ನು ಸ್ಪಷ್ಟಪಡಿಸಲು ತನ್ನ ಮಾತುಗಳನ್ನು ಈ ರೀತಿ ಮುಂದುವರೆಸಿತು:

### ವ್ಯವಹಾರ ಪಂಚಭೂತಗಳನ್ನು ಅವಲಂಬಿಸಿದೆ

''ಬ್ರಹ್ಮಾಂಡ ವಿಶ್ವಾಂಡಗಳಲ್ಲಿ ಪ್ರತಿದಿನದಲ್ಲಿ ಪ್ರತಿಯೊಂದು ಪ್ರಾಣಿಗೂ ಸುಖ-ದುಃಖ ಮುಂತಾದ ಹಲವಾರು ಬಗೆಯ ಅನುಭವಗಳು ಆಗುತ್ತವೆ. ನಾನಾ ಬಗೆಯ ವಿಚಾರಗಳು ಬರುತ್ತಿರುತ್ತವೆ. ಈ ಎಲ್ಲವೂ ಶಬ್ದ-ಸ್ಪರ್ಶ-ರೂಪ-ರಸ-ಗಂಧ ಈ ಐದು ವಿಷಯಗಳಿಗೆ ಸಂಬಂಧಿಸಿಯೇ ಇರುತ್ತವೆ. ಉದಾಹರಣೆಗೆ: ನಾವು ಒಂದು ಹೂವನ್ನು ನೋಡುತ್ತೇವೆ ಎಂದಿಟ್ಟು

ಕೊಳ್ಳೋಣ. ಆ ಹೂವಿನ ಅರಳುವಿಕೆಯ ಸುಂದರ ಬಗೆ, ಅದರಲ್ಲಿನ ಲೆಕ್ಕಾಚಾರ, ದಳಗಳ ಹರಡಿಕೊಳ್ಳುವಿಕೆ ಇತ್ಯಾದಿಗಳನ್ನು ಕಣ್ಣು ಗ್ರಹಿಸುತ್ತದೆ. ಅದರಿಂದ ಬರುತ್ತಿರುವ ಪರಿಮಳವನ್ನು ಮೂಗು ಗ್ರಹಿಸುತ್ತದೆ. ಅದರ ಮೃದು ಸ್ಪರ್ಶವನ್ನು ಚರ್ಮ ಗ್ರಹಿಸುತ್ತದೆ, ಇತ್ಯಾದಿ. ಇದೇ ರೀತಿ ಪ್ರತಿಜೀವಿ ಪ್ರತಿದಿನ ಬೆಳಗಿನಿಂದ ರಾತ್ರಿಯವರೆಗೆ ನಡೆಸುವ ಎಲ್ಲಾ ಚಟುವಟಿಕೆಗಳೂ ಈ ಐದರ ಸುತ್ತಲೇ ಸುತ್ತಿಕೊಂಡಿರುತ್ತದೆ.

ಈಗ ನಾವು ಒಂದು ಹೂವು ನೋಡಿದೆವಲ್ಲ, ಆ ನೋಡುವ ಕ್ರಿಯೆಯಲ್ಲಿ ಆಗುವ ಪ್ರತಿಕ್ರಿಯೆಗಳನ್ನು ಇಲ್ಲಿ ಸ್ವಲ್ಪ ಗಮನಿಸೋಣ. ಕಣ್ಣಿನಿಂದ ಹೊರಟ ಕಿರಣಗಳು ಹೂವಿನ ಆಕಾರದ ಸುತ್ತ ಸುತ್ತು ಕಟ್ಟಿಕೊಳ್ಳುತ್ತದೆ. ಅಂದರೆ ಆ ಕ್ಷಣಕ್ಕೆ ಅವು ಹೂವಿನ ಆಕಾರವನ್ನೇ ತಳೆದುಬಿಡುತ್ತವೆ. ಇದನ್ನೇ ಪಾರಿಭಾಷಿಕ ಶಬ್ದದಲ್ಲಿ 'ವೃತ್ತಿ' ಎನ್ನುತ್ತಾರೆ. ಅವು ಮತ್ತೆ ಹಿಂದಕ್ಕೆ ಸಾಗಿ ಕಣ್ಣಿನೊಳಗಿನ ಪಟಲಗಳನ್ನು ಸೇರುತ್ತವೆ. ದೃಶ್ಯನರ (Visual Nerve)ಗಳ ಮೂಲಕ ಅದು ಬುದ್ಧಿಯನ್ನು ಮುಟ್ಟುತ್ತದೆ. ಆಗ ಬುದ್ಧಿಯೂ ಅದೇ ಆಕಾರವನ್ನು ತಳೆದು ಅದು 'ಹೂವು' ಎಂದು ನಿಶ್ಚಯಿಸುತ್ತದೆ, ಅನಂತರ ಅದರ ಒಳ ಪ್ರಭೇದವಾದ ಮಲ್ಲಿಗೆ, ಜಾಜಿ ಇತ್ಯಾದಿ ಅಂಶವನ್ನು ನಿರ್ಣಯಿಸುತ್ತದೆ. ಈ ಎಲ್ಲಾ ಪ್ರತಿಕ್ರಿಯೆ ನಮ್ಮ ಜ್ಞಾನೇಂದ್ರಿಯಗಳ ಪ್ರತಿ ಚಟುವಟಿಕೆಯಲ್ಲೂ ಸಮಾನವಾಗಿರುತ್ತದೆ. ಇಲ್ಲಿ ಹೇಳುವಾಗ ಬರೆಯುವಾಗ ಈ ಪ್ರಕ್ರಿಯೆ ದೀರ್ಘಕಾಲವನ್ನು ತೆಗೆದುಕೊಳ್ಳುತ್ತದೆ, ಆದರೆ ಅನುಭವದ ನೆಲೆಯಲ್ಲಿ ಇವು ಒಂದು ಸೆಕೆಂಡಿನ ೧/೨೫೬ ಭಾಗದಲ್ಲಿ ಘಟಿಸಿಬಿಡುತ್ತದೆ ಎಂದು ಶಾಸ್ತ್ರಗಳು ಹೇಳುತ್ತವೆ.

ಈ ರೀತಿ ಚಿತ್ತ (ಬುದ್ಧಿ), ವಿಷಯ ಅಥವಾ ವಸ್ತು ಮತ್ತು ಅದರ ಆಕಾರ ಗುಣಸ್ವರೂಪವಾಗಿ ತಾನೇ ರೂಪ ತಳೆದು ಅದನ್ನು ಅನುಭವಕ್ಕೆ ತಂದುಕೊಳ್ಳುತ್ತದೆ. ಆದುದರಿಂದ ಸನಕಾದಿಗಳು ಹೇಳಿದಂತೆ ಶಬ್ದಾದಿ ವಿಷಯಗಳು ಚಿತ್ತದಲ್ಲಿಯೂ, ಚಿತ್ತವು ಶಬ್ದಾದಿ ವಿಷಯಗಳಲ್ಲಿಯೂ ಸೇರಿ ಹೋಗಿ ಅದರದೇ ಆಕಾರವನ್ನು ತಳೆದುಬಿಡುತ್ತವೆ. ಈ ಎರಡು ಅಂದರೆ ಚಿತ್ತ ಮತ್ತು ವಿಷಯ, ದೇಹವನ್ನು ಆಶ್ರಯಿಸಿಕೊಂಡಿರುತ್ತವೆ. ದೇಹವಿಲ್ಲದಿದ್ದರೆ ಈ ಜ್ಞಾನ ಈ ಅನುಭವ ವ್ಯಕ್ತವಾಗುವುದಾದರೂ ಎಲ್ಲಿ? ಆದುದರಿಂದ ದೇಹ ಈ ಚಿತ್ತ ಮತ್ತು ವಿಷಯ ಎರಡಕ್ಕೂ ಉಪಾಧಿಯಾಗಿದೆ. ಅಂದರೆ ದೇಹದ ದೆಸೆಯಿಂದ ಇವು ಚಟುವಟಿಕೆಯಲ್ಲಿ ತೊಡಗಿರುತ್ತವೆ. ಇದಕ್ಕೂ ಆತ್ಮನಿಗೂ ಯಾವ ಸಂಬಂಧವೂ ಇಲ್ಲ.

ಮತ್ತೆ ಮತ್ತೆ ಲೌಕಿಕವಾದ ಎಲ್ಲಾ ರೀತಿಯ ಭೋಗಗಳನ್ನೂ ವಿಷಯಗಳನ್ನೂ ಅನುಭವಿಸುತ್ತಲೇ ಇರುವುದರಿಂದ ಚಿತ್ತ ಅದರಲ್ಲೇ ಆಸಕ್ತಿ ಹೊಂದಿರುತ್ತದೆ. ಆ ಕಾರಣ ಚಿತ್ತ ಅವುಗಳನ್ನು ಬಯಸುತ್ತದೆ. ಹಾಗಾಗಿ ವಿಷಯಗಳು ಸದಾ ಚಿತ್ತವನ್ನು ಪ್ರವೇಶ ಮಾಡುತ್ತಲೇ ಇರುತ್ತವೆ. ಆ ಕಾರಣ ಅವು ಚಿತ್ತಮಯವಾಗಿಬಿಡುತ್ತವೆ ಮತ್ತು ಚಿತ್ತ ಆ ವಿಷಯಗಳಮಯವಾಗಿ ಬಿಡುತ್ತದೆ.

### ಮೂರು ಅವಸ್ಥೆಗಳಲ್ಲಿ ಪಂಚಭೂತಾತ್ಮಕ ಅನುಭವ

ಈ ಎಲ್ಲ ರೀತಿಯ ಅನುಭವಗಳೂ ಜೀವಿಗೆ ಜಾಗ್ರತ್ ಸ್ವಪ್ನ ಸುಷುಪ್ತಿ ಎಂಬ ಮೂರೂ ಸ್ಥಿತಿಗಳಲ್ಲಿ ಅನುಭವಕ್ಕೆ ಬರುತ್ತವೆ. ಈ ಮೂರು ಅವಸ್ಥೆಗಳೂ ಪ್ರಾರಂಭದಲ್ಲಿ ಪ್ರಸ್ತಾಪ ಮಾಡಿದ ಪ್ರಕೃತಿಯ ಸತ್ವ-ರಜಸ್-ತಮಸ್ ಗುಣಗಳ ಪರಿಣಾಮವೇ ಆಗಿವೆ. ಮತ್ತು ಈ ಅವಸ್ಥೆಗಳು ಬುದ್ಧಿಯ ವೃತ್ತಿಯಾಗಿವೆ. ಈ ಮೂರೂ ಅವಸ್ಥೆಗಳಲ್ಲಿ ಜೀವ ಸಾಕ್ಷೀಭೂತನಾಗಿ ಇರುತ್ತಾನೆಯೇ ಹೊರತು, ಅಲ್ಲಿನ ಆಯಾಯ ಅನುಭವಗಳೊಡನೆ ತನ್ನನ್ನು ಒಂದಾಗಿಸಿಕೊಳ್ಳುವುದಿಲ್ಲ.

ಜಾಗ್ರದವಸ್ಥೆಯಲ್ಲಿ ಎಲ್ಲಾ ಇಂದ್ರಿಯಗಳ ಮೂಲಕ ಹೊರಗೆ ಕಾಣುವ ಎಲ್ಲವನ್ನೂ ಅನುಭವಿಸುವನು. ಈ ಜಾಗ್ರದವಸ್ಥೆಯ ನೆನಪಿನಿಂದಾದ ಸಂಸ್ಕಾರದಿಂದ ಮನಸ್ಸಿನಲ್ಲಿ ನಿರ್ಮಾಣವಾದ ಕಲ್ಪಿತ ವಿಷಯಗಳ ಅನುಭವವನ್ನು ಹೃದಯದಲ್ಲಿ ಸ್ವಪ್ನಾವಸ್ಥೆಯಲ್ಲಿ ಹೊಂದುತ್ತಾನೆ. ಈ ಎಲ್ಲಾ ವಸ್ತುಗಳೂ ವಿಷಯಗಳೂ ಅವುಗಳಿಂದಾದ ಅನುಭವಗಳೂ ಎಲ್ಲವೂ ಸುಷುಪ್ತಿ ಅವಸ್ಥೆಯಲ್ಲಿ ಲೀನವಾಗಿ ಹೋಗುತ್ತವೆ. ಈ ಎಲ್ಲಾ ಲೀನವಾದ ಏನೂ ಇಲ್ಲದ ಅನುಭವದ ಸ್ಥಿತಿಯನ್ನು ಜೀವಿ ಅನುಭವಿಸುತ್ತಾನೆ. ಜಾಗ್ರದವಸ್ಥೆಯಲ್ಲಿ ಅನುಭವಗಳು ಇಂದ್ರಿಯಗಳ ನೆಲೆಯಲ್ಲಿ, ಸ್ವಪ್ನಾವಸ್ಥೆಯಲ್ಲಿ, ಅನುಭವಗಳು ಮನಸ್ಸಿನ ನೆಲೆಯಲ್ಲಿ ಉಂಟಾಗುತ್ತವೆ. ಆದರೆ ಈ ಅವಸ್ಥೆಗಳಾಗಲೀ, ಅವಸ್ಥೆಗಳಲ್ಲಿ ಅನುಭವಿಸುವ ನೆಲೆಗಳಾದ ಇಂದ್ರಿಯಗಳು, ಮನಸ್ಸು ಬುದ್ಧಿಗಳಾಗಲೀ ಅವುಗಳೆಲ್ಲದರ ಹಿನ್ನೆಲೆಯಲ್ಲಿರುವ ಜೀವಾತ್ಮನೊಡನೆ ಸಂಬಂಧ ಹೊಂದಿರುವುದಿಲ್ಲ.

### ಅವಸ್ಥೆಗಳು ಮಾಯಾಕಲ್ಪಿತ

**ಏವಂ ವಿಮೃಶ್ಯ ಗುಣತೋ ಮನಸಸ್ತ್ರ್ಯವಸ್ಥಾ**
**ಮನ್ಮಾಯಯಾ ಮಯಿ ಕೃತಾ ಇತಿ ನಿಶ್ಚಿತಾರ್ಥಾಃ ।**
**ಸಂಛಿದ್ಯ ಹಾರ್ದಮನುಮಾನಸದುಕ್ತಿತೀಕ್ಷ್ಣ-**
**ಜ್ಞಾನಾಸಿನಾ ಭಜತ ಮಾಖಿಲಸಂಶಯಾಧಿಮ್ ॥**

ಈ ರೀತಿ ವಿಚಾರ ಮಾಡಿ ಸತ್ವ ರಜಸ್ಸು ತಮಸ್ಸು ಮೂರೂ ಗುಣಗಳಿಂದ ಉಂಟಾಗುವ ಮನಸ್ಸಿನ ಜಾಗ್ರತ್ ಸ್ವಪ್ನ ಸುಷುಪ್ತಿ ಎಂಬ ಮೂರು ಅವಸ್ಥೆಗಳೂ ಮಾಯಾಕಲ್ಪಿತ, ಪ್ರಕೃತಿ ಕಲ್ಪಿತ ಎಂಬುದನ್ನು ಮತ್ತೆ ಮತ್ತೆ ನೆನಪಿಸಿಕೊಂಡು ನಿಶ್ಚಯಕ್ಕೆ ಬರಬೇಕು. ಈ ರೀತಿ ಮನನ ಮಾಡಿಕೊಳ್ಳಲು ಚಿಂತಿಸಿ ಮಥಿಸಿ ನಿಷ್ಕರ್ಷಿಸಿ ನಿರ್ಣಯಕ್ಕೆ ಬರಲು ಅಡ್ಡಿಪಡಿಸುವ ಎಲ್ಲವನ್ನೂ ಈ ರೀತಿಯ ತತ್ತ್ವೋಪದೇಶಕವಾದ ಸದುಕ್ತಿಗಳೆಂಬ ತೀಕ್ಷ್ಣವಾದ

ಖಡ್ಗದಿಂದ ಕತ್ತರಿಸಿ ಹಾಕಬೇಕು. ಸಂದೇಹ ಸಂಶಯಗಳಿಗೆ ಅವಕಾಶ ನೀಡಬಾರದು. ಅವುಗಳನ್ನೂ 'ವಿವೇಕ'ದಿಂದಲೇ ನಿವಾರಿಸಿಕೊಳ್ಳಬೇಕು.

**ಈಕ್ಷೇತ ವಿಭ್ರಮಮಿದಂ ಮನಸೋ ವಿಲಾಸಂ**
**ದೃಷ್ಟಂ ವಿನಷ್ಟಮತಿಲೋಲಮಲಾತ ಚಕ್ರಮ್ ।**
**ವಿಜ್ಞಾನಮೇಕ ಮುರುಧೇವ ವಿಭಾತಿ ಮಾಯಾ**
**ಸ್ವಪ್ನಸ್ತ್ರಿಧಾ ಗುಣವಿಸರ್ಗಕೃತೋ ವಿಕಲ್ಪಃ ॥**

ಜಗತ್ತು ಮನಸ್ಸಿನ ವಿಲಾಸ. ಅದು ಮನಸ್ಸಿನ ತೆರೆಯ ಮೇಲೆ ಮಾತ್ರ ಕಾಣುತ್ತದೆ. ಮನಸ್ಸೆಂಬ ತೆರೆಯನ್ನು ಕತ್ತರಿಸಿಹಾಕಬೇಕು. ದೇಹಾದಿರೂಪ ಪ್ರಪಂಚದಿಂದ ಮನಸ್ಸನ್ನು ಹಿಂದಕ್ಕೆ ಸೆಳೆದುಕೊಳ್ಳಬೇಕು. ವಿಷಯಗಳಿಂದ ವಿಷಯಾಭಿಲಾಷೆಯಿಂದ ಮನಸ್ಸು ಕೂಡಿರುವವರೆಗೆ, ಜಾಗ್ರತ್ ಸ್ವಪ್ನ ಸುಷುಪ್ತಿ, ಇಂದ್ರಿಯ ಮನ ಬುದ್ಧಿ, ಇದು ಬೇರೆ–ಅದು ಬೇರೆ, ಜ್ಞಾನ ಜ್ಞಾತೃ ಜ್ಞೇಯ, ನೀನು–ನಾನು, ಇತ್ಯಾದಿ ಸಾವಿರಾರು ಬಗೆಯ ಭೇದಗಳ ಜ್ಞಾನ ಅನುಭವ ಆಗುತ್ತಿರುತ್ತದೆ. ಮನಸ್ಸನ್ನು ಈ ಎಲ್ಲದರಿಂದ ಹಿಂದಕ್ಕೆಳೆದುಕೊಳ್ಳಲು ಇರುವುದು ಜ್ಞಾನ, ವಿಜ್ಞಾನವೊಂದೇ. ಭೇದಗಳು ಎಷ್ಟು ಅನಂತ ಬಗೆಯದಿರಲಿ, ಅದು ಸ್ಥಿರವಲ್ಲ, ಅಳಿಸಿ ಹೋಗುವಂತಹುದು, ಕಲ್ಪಿತ, ಮೇಲೆದ್ದು ಬೀಳುವ ಅಲೆಗಳಂತೆ... ಇತ್ಯಾದಿ ವಿಚಾರಗಳನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾ ಭಾವಿಸಿಕೊಳ್ಳುತ್ತಾ ಸ್ವಸ್ವರೂಪವನ್ನು ಕಾಣಲು ಪ್ರಯತ್ನಿಸಬೇಕು. 'ತನ್ನನ್ನು' ಅಥವಾ 'ನಾನು' ಎಂಬುದನ್ನು ಕಂಡು ಮಾತಿಗೆ ನಿಲುಕದ ಬಣ್ಣಿಸಲಾಗದ ಆನಂದ ಅನುಭವಿಸಬೇಕು. ಈ ರೀತಿ ಸ್ವಾನಂದಾಮೃತಾಸ್ವಾದದಲ್ಲಿ ಮತ್ತನಾಗಿರುವಾಗಲೂ ಶರೀರ ಇರುವುದರಿಂದ ಪ್ರಪಂಚ, ಪ್ರಪಂಚದ ವಿಷಯಗಳ ಅನುಭವವು ಆಗುತ್ತಲೇ ಇರುತ್ತದೆ. ಆದರೆ ಅದರೆಡೆಗೆ ಆಕರ್ಷಿತರಾಗಬಾರದು, ಅದನ್ನು ಕಡೆಗಣಿಸಬೇಕು. ಮತ್ತೆ ಅದರ ಜಾಲದಲ್ಲಿ ಸಿಲುಕಿ ಮೋಸ ಹೋಗಬಾರದು. ಈ ಎಲ್ಲವೂ ಶರೀರ ಬಿದ್ದು ಹೋಗುವಲ್ಲಿಯವರೆಗೆ ಮಾತ್ರ. ಸ್ವಸ್ವರೂಪ ಸಾಕ್ಷಾತ್ಕರಿಸಿಕೊಂಡು ನಿಜಾಮೃತದಲ್ಲಿ ಲೀನವಾಗಿರುವಾಗ, ಈ ಶರೀರ ನಿಂತಿರಲಿ, ಕುಳಿತಿರಲಿ, ಎಲ್ಲಿಗಾದರೂ ಹೋಗಲಿ, ಎಲ್ಲಿಂದಾದರೂ ಬರಲಿ ಅದು ಯಾವುದೂ ಅವನನ್ನು ಬಾಧಿಸುವುದೇ ಇಲ್ಲ.

**ದೇಹೋಽಪಿ ದೈವವಶಗಃ ಖಲು ಕರ್ಮ ಯಾವತ್**
**ಸ್ವಾರಂಭಕಂ ಪ್ರತಿಸಮೀಕ್ಷತ ಏವ ಸಾಸುಃ ।**
**ತಂ ಸಪ್ರಪಂಚಮಧಿರೂಢಸಮಾಧಿಯೋಗಃ**
**ಸ್ವಾಪ್ನಂ ಪುನರ್ನ ಭಜತೇ ಪ್ರತಿಬುದ್ಧವಸ್ತು ॥**

ಪ್ರಾಣ ಇಂದ್ರಿಯ ಮನ ಬುದ್ಧಿ ಮೊದಲಾದವುಗಳಿಂದ ಕೂಡಿದ ಈ ಶರೀರ ಪ್ರಾರಬ್ಧಕರ್ಮಾಧೀನ. ಹುಟ್ಟುವುದಕ್ಕೆ, ಅಂದರೆ ರೂಪತಳೆಯುವುದಕ್ಕೆ, ಕಾರಣವಾದ ಕರ್ಮಫಲ ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೆ ಈ ಪ್ರಾಣ ಇಂದ್ರಿಯಾದಿಗಳಿಂದಾದ ಶರೀರ ಇದ್ದೇ ಇರುತ್ತದೆ, ಆದರೆ ಕನಸಿನಿಂದ ಎಚ್ಚರವಾದ ಮೇಲೆ ಕನಸಿನಲ್ಲಿ ಕಂಡ ವಸ್ತು ವ್ಯಕ್ತಿ ಅನುಭವಗಳ ಮೇಲೆ 'ನಾನು', 'ನನ್ನದು' ಎಂಬ ಅಭಿಮಾನ ಹೊಂದುವುದಿಲ್ಲ ತಾನೆ! ಹೊಂದಿದರೂ ಅದು ದೊರಕುವುದಾದರೂ ಹೇಗೆ? ಒಮ್ಮೆ ಕಂಡ ಕನಸನ್ನು ಮತ್ತೆ ಕಾಣುವುದಾದರೂ ಹೇಗೆ? ಅದೇ ಕನಸನ್ನು ಕಂಡು ಅದೇ ಅನುಭವವನ್ನು ಪಡೆದು ಅದರ ಮೇಲೆ ತನ್ನದೆಂಬ ಅಭಿಮಾನ ಹೊಂದುವುದು ತಾನೇ ಹೇಗೆ! ತನ್ನ ಸ್ವಸ್ವರೂಪಪವರಿತ ಆನಂದದಲ್ಲಿ ಆತ್ಮಾನಂದದಲ್ಲಿ ಬ್ರಹ್ಮಾನಂದದಲ್ಲಿ ಲೀನನಾದವನು ಇವುಗಳ ಮೇಲೆ ಅಭಿಮಾನ ಪಡುವುದಿಲ್ಲ. ಇದೇ ಸಾಂಖ್ಯಯೋಗಗಳ ಗಹನವಾದ ಸಿದ್ಧಾಂತ.

**ಅಹಂ ಯೋಗಸ್ಯ ಸಾಂಖ್ಯಸ್ಯ ಸತ್ಯಸ್ಯರ್ತಸ್ಯ ತೇಜಸಃ**
**ಪರಾಯಣಂ ದ್ವಿಜಶ್ರೇಷ್ಠಾಃ ಶ್ರಿಯಃ ಕೀರ್ತೇರ್ದಮಸ್ಯ ಚ ॥**
**ಮಾಂ ಭಜಂತಿ ಗುಣಾಃ ಸರ್ವೇ ನಿರ್ಗುಣಂ ನಿರಪೇಕ್ಷಕಮ್ ॥**

'ಯೋಗ, ಸಾಂಖ್ಯ, ಸತ್ಯ, ಋತ, ಶ್ರೀ, ಕೀರ್ತಿ, ದಮ — ಈ ಎಲ್ಲದರ ಮೂಲ ನೆಲೆ ನಾನೇ. ನಿರ್ಗುಣನೂ ನಿರಪೇಕ್ಷನೂ ಆದ ನನ್ನನ್ನೇ ಈ ಎಲ್ಲಾ ಗುಣಗಳೂ ಸೇರುತ್ತವೆ. ನನ್ನನ್ನು ಆಶ್ರಯಿಸಿದ ಮೇಲೆ ನನ್ನನ್ನು ಸೇರಿದ ಮೇಲೆ ಸತ್ವಾದಿ ಗುಣಗಳ ಪರಿಣಾಮದಂತೆ ಇವು ಕ್ಷಯಿಸುವುದಿಲ್ಲ. ನಿತ್ಯ ನಿರಂತರವಾಗಿ ನನ್ನಲ್ಲಿ ಇರುತ್ತದೆ.'

ಈ ರೀತಿ ಸನಕಾದಿಗಳ ಪ್ರಶ್ನೆಗೆ ಹಂಸರೂಪಿ ಪರಮಾತ್ಮನು ಉತ್ತರಿಸಿ ತನ್ನ ಧಾಮಕ್ಕೆ ಹಿಂತಿರುಗಿ ಹೋಗುತ್ತಾನೆ. ಈ ರೀತಿ ಹಂಸಗೀತೆ ಉದ್ಭವಿಸಿದ ಬಗೆಯನ್ನು ಪರಮಾತ್ಮ ಉದ್ಧವನಿಗೆ ತಿಳಿಸುತ್ತಾನೆ.

### ಉಪಸಂಹಾರ

ವೇದಾಂತಶಾಸ್ತ್ರಗಳೂ ದರ್ಶನಶಾಸ್ತ್ರಗಳೂ ಭಗವದ್ಗೀತೆಯು ಹೇಳದ ಯಾವುದೋ ಹೊಸ ಸತ್ಯವನ್ನೇನೂ ಈ ಗೀತೆ ಹೇಳುತ್ತಿಲ್ಲ , ಹೇಳಿಲ್ಲ ; ಇದರ ಅಗತ್ಯವಾದರೂ ಏನು? ಎಂಬ ಪ್ರಶ್ನೆ ಮೂಡಬಹುದು. ತ್ರಿಗುಣಗಳ ಪ್ರಭಾವ ಅದರಿಂದ ವಿಕಾಸಗೊಂಡ ಪಂಚಭೂತಾದಿ ಬ್ರಹ್ಮಾಂಡ ವಿಶ್ವಾಂಡಗಳ ವಿಚಾರ ಎಷ್ಟೆಷ್ಟು ಕೇಳಿದ್ದರೂ ತಿಳಿದಿದ್ದರೂ ನಾವೇ ಪ್ರವಚನಾದಿಗಳನ್ನು ಮಾಡಿದ್ದರೂ ಅವುಗಳ ಪ್ರಭಾವದಿಂದ ಹೊರಬರುವುದು ಅತ್ಯಂತ ಕಷ್ಟ. ಈ ಗೀತೆ ತಿಳಿಸುವಂತೆ ಈ ವಿಚಾರಗಳನ್ನು ಮತ್ತೆ ಮತ್ತೆ ಕೇಳುವುದು, ಅವುಗಳನ್ನು ಮತ್ತೆ ಮತ್ತೆ ಮನನ ಮಾಡುವುದು ಅಗತ್ಯವಿದೆ. ಆ ಹಿನ್ನೆಲೆಯಲ್ಲಿ ಈ ಗೀತೆಯೂ ಸನ್ಮಾರ್ಗದರ್ಶಕತ್ವದ ಕಾರಣ, ಚಿತ್ತ ವಿಷಯಗಳ ಪರಸ್ಪರ ಬಲಿಷ್ಠವಾದ ಬೆಸುಗೆಯನ್ನು ಕತ್ತರಿಸಿಕೊಳ್ಳುವ ತತ್ತ್ವ ವಿಚಾರ ಬೋಧಿಸಿರುವ ಕಾರಣ ಮುಕ್ತಿಮಾರ್ಗದರ್ಶಕವಾಗಿ ಪ್ರಾಮುಖ್ಯವನ್ನು ಹೊಂದುತ್ತದೆ.